ಮಧ್ಯರಾತ್ರಿಗೆ ಸನಿಹವಾಗಿದ್ದ ಆ ಕಾರಿರುಳ ಹೊತ್ತಿನಲ್ಲಿ ಏಕಾಂಗಿಯಾಗಿ ನಡೆಯುತ್ತಿದ್ದ ಪ್ರದೀಪ್, ಸ್ಮಶಾನ ಇನ್ನೆಷ್ಟು ದೂರವಿರಬಹುದೆಂಬ ಆತಂಕಭರಿತ ಕಾತರದಿಂದ ಮುಂದಡಿಯಿಡುತ್ತಿದ್ದನು. ಹಲವು ವರ್ಷಗಳಿಂದ ಕತ್ತಲಾದರೇನೇ ರಸ್ತೆಗಿಳಿಯಲು ಹೆದರುತ್ತಿದ್ದ ಜನರಿಗೆ, ತಮ್ಮೂರಿನಲ್ಲಿ ಈ ರೀತಿ ಆಗಂತುಕನೊಬ್ಬ ನಡುರಾತ್ರಿ ಒಬ್ಬಂಟಿಯಾಗಿ ನಡೆಯುತ್ತಿರುವುದನ್ನು ತಿಳಿದಿದ್ದರೆ ಏನೆನ್ನುತ್ತಿದ್ದರೋ? ಅಮವಾಸ್ಯೆಗೆ ಇನ್ನೂ ನಾಲ್ಕು ದಿನಗಳಿದ್ದವು. ಸುತ್ತಮುತ್ತ ಏನೂ ಕಾಣದಿದ್ದರೂ ಚಂದ್ರನ ಕ್ಷೀಣ ಬೆಳಕಿನಲ್ಲಿ ಮುಂದಡಿಯಿಡಲು ಡಾಮರು ಕಿತ್ತು ಹೋಗಿದ್ದ ರಸ್ತೆ ಕಾಣಿಸುತ್ತಿತ್ತು. ನಡೆಯುತ್ತಾ ಆತ ಸ್ಮಶಾನಕ್ಕೆ ಹತ್ತಿರವಾಗಿದ್ದ.

ಬೀದಿ ದೀಪಗಳ್ಯಾವುವೂ ಉರಿಯುತ್ತಿರಲಿಲ್ಲ. ಪ್ರದೀಪ್ ಪ್ಯಾಂಟಿನ ಕಿಸೆಯನ್ನೊಮ್ಮೆ ಸ್ಪರ್ಶಿಸಿ ಟಾರ್ಚ್‌ಲೈಟ್ ಇರುವುದನ್ನು ಖಚಿತಪಡಿಸಿಕೊಂಡ. ಈ ಊರಿನ ಬಗೆಗಿನ ವದಂತಿಗಳು, ಕತೆಗಳು ಒಂದೊಂದಾಗಿ ಮನದಲ್ಲಿ ಹರಿದು ಹೋಗುತ್ತಿದ್ದವು. ರಾತ್ರಿ ಹೊತ್ತಿನಲ್ಲಿ ದೆವ್ವ ಪಿಶಾಚಿಗಳು ಕಾಟ ಕೊಡುತ್ತಿವೆಯೆಂದೂ ಅವುಗಳಿಗೆ ಈಗಾಗಲೇ ಕೆಲವು ಜೀವಗಳು ಬಲಿಯಾಗಿವೆಯೆಂದು ಗೊತ್ತಿದ್ದೂ ಆತ ಈ ನಡುರಾತ್ರಿಯಲ್ಲಿ ಸ್ಮಶಾನಕ್ಕೆ ಹೊರಟಿದ್ದಾನೆ!

ಸ್ಮಶಾನದ ಮುರುಕಲು ಗೇಟಿನ ಬಳಿ ತಲುಪಿ, ಅಲ್ಲಿ ನಿಂತು ಸಿಗರೇಟಿನ ಹೊಗೆ ಬಿಡುತ್ತಾ ಯೋಚನಾಮಗ್ನನಾಗಿದ್ದ ಪ್ರದೀಪನಿಗೆ ಏನೋ ಸಪ್ಪಳ ಕೇಳಿಸಿ ಬೆಚ್ಚಿ ಬಿದ್ದ. ದಿಟ್ಟಿಸಿ ನೋಡಿದರೆ ಸ್ಮಶಾನದೊಳಗಿಂದ ಯಾರೋ ನಡೆದುಕೊಂಡು ಬಂದಂತೆ ಕಾಣಿಸಿತು. ಒಂದು ಕ್ಷಣ ಭಯದಿಂದ ಆತನ ಕೈಕಾಲು ನಡುಗಿತು. ಸಾವರಿಸಿಕೊಂಡು ನಡೆಯುವುದನ್ನು ಮತ್ತೆ ಮುಂದುವರಿಸಿದಾಗ ಬರುತ್ತಿದ್ದ ವ್ಯಕ್ತಿ ವೇಗ ಪಡೆದುಕೊಂಡು ಓಡುತ್ತಾ ಬಂದು ಪ್ರದೀಪನನ್ನು ಸ್ಪರ್ಶಿಸಿಕೊಂಡೇ ರಭಸದಿಂದ ಮುನ್ನುಗ್ಗಿ ಹೋಯಿತು. ಹಿಂತಿರುಗಿ ನೋಡಿದರೆ ಆತ ಬಹಳ ದೂರಕ್ಕೆ ಹೋಗಿ ಆಗಿತ್ತು.

ಬೇಸಿಗೆಯ ಸೆಖೆಗೆ ಬಳಲಿ ಬೆವರಿದ್ದ ಪ್ರದೀಪ್‌ಗೆ ಒಂದು ಕ್ಷಣ ಏನೂ ಹೊಳೆಯಲಿಲ್ಲ. ದೆವ್ವ ಭೂತಗಳಿಗೆ ಆತ ಹೆದರುವವನಲ್ಲ. ಆದರೂ ಅಲ್ಲಿನ ವಾತಾವರಣ ಯಾರನ್ನಾದರೂ ಭಯಗೊಳಿಸುವಂತಿತ್ತು. ಅದೂ ಅಲ್ಲದೆ ಗುರುತು ಪರಿಚಯದವರ್‍ಯಾರೂ ಇಲ್ಲದ ಈ ನಿರ್ಜನ ಪ್ರದೇಶದಲ್ಲಿ ಎಂಥಾ ಧೈರ್ಯವಂತನೂ ಎದೆಗುಂದುವ ಸಾಧ್ಯತೆ ಇತ್ತು. ಸ್ವಭಾವತಃ ಪ್ರದೀಪ್ ಸಾಹಸಿಯಾಗಿದ್ದ. ಆದರೂ ಒಮ್ಮಿಂದೊಮ್ಮೆಲೇ ಒಂದು ಮನುಷ್ಯಾಕೃತಿ ಉದ್ಭವಿಸಿ ತನಗೆ ಡಿಕ್ಕಿ ಹೊಡೆದು ಹಾದು ಹೋದ ರೀತಿ ಆತನನ್ನು ಅಧೀರನನ್ನಾಗಿಸಿತ್ತು.

ತಾನು ಒಂಟಿಯಾಗಿ ಬಂದು ತಪ್ಪು ಮಾಡಿದೆನೆಂದು ಅನಿಸಿತು ಪ್ರದೀಪನಿಗೆ. ಆದರೂ ಧೈರ್ಯದಿಂದ ಸ್ಮಶಾನದೊಳಗೆ ಪ್ರವೇಶಿಸುತಿದ್ದಂತೆ ಅಲ್ಲೇ ಇದ್ದ ಮರದ ಬುಡದಲ್ಲಿ ಯಾರೋ ನಿಂತಿದ್ದಂತೆ ಕಾಣಿಸಿತು. ಕುತೂಹಲದ ಜೊತೆ ಹೆದರಿಕೆಯೂ ಪ್ರದೀಪನನ್ನಾವರಿಸಿತು. ಆ ಶರೀರ ನಿಂತಲ್ಲಿಯೇ ಇತ್ತು. ಸನಿಹಕ್ಕೆ ಹೋದಾಗ ಒಮ್ಮೆ ವಿಕಾರವಾಗಿ ಕೆಮ್ಮಿ, "ಯಾರು ನೀನು?" ಎಂದದು ಕೇಳಿದಾಗ ಪ್ರದೀಪ ಹೌಹಾರಿದ. ಏನುತ್ತರಿಸಬೇಕೆಂದು ತಡವರಿಸುತ್ತಿದ್ದಾಗ ಆ ವ್ಯಕ್ತಿ ಮತ್ತೆ ಮಾತನಾಡಿತು. ಈ ಬಾರಿ ಮಾತಿನಲ್ಲಿ ಹಿಂದಿನ ಒರಟುತನವಿರಲಿಲ್ಲ. ಅದು ಮನುಷ್ಯನೋ ದೆವ್ವವೋ ಎಂಬ ದ್ವಂದ್ವದಲ್ಲಿದ್ದಾಗ, "ಊರಿಗೆ ಹೊಸಬನೇ?" ಎಂದು ಮತ್ತೆ ತೂರಿ ಬಂತು ಪ್ರಶ್ನೆ.

"ಇಲ್ಲಿ ಮನುಷ್ಯರಾರೂ ರಾತ್ರಿ ಹೊತ್ತಿನಲ್ಲಿ ಸಂಚರಿಸುವುದಿಲ್ಲ!" ಎಂದು ಆ ಆಕೃತಿ ಮತ್ತೆ ಉಲಿದಾಗ ಪ್ರದೀಪ್ ತಲೆ ಕೊಡವಿಕೊಂಡ. ಏನಾದರಾಗಲಿ ನೋಡಿಯೇ ಬಿಡೋಣವೆಂದು ಕೇಳಿಯೇ ಬಿಟ್ಟ, "ಯಾಕೆ?" ಈ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲವೆನಿಸುತ್ತದೆ, ಆ ಆಕಾರ ಕೆಲ ಕ್ಷಣ